ಪ್ರಮಾಣೀಕರಿಸಿದ ದಿನಾಂಕ: 19.06.2024

**ಪಾಟೀ ಸವಾಲು:- 1ನೇ ಆರೋಪಿ ಪರ ಶ್ರೀ ಎಸ್ ಆರ್.ಜೆ ವಕೀಲರಿಂದ:-**

1. ನಾನು 7ನೇ ತರಗತಿವರೆಗೆ ಓದಿರುತ್ತೇನೆ. 1ನೇ ಆರೋಪಿ ಘಟನೆ ನಡೆದ ಮೂರು ತಿಂಗಳ ಮೊದಲಿನಿಂದಲೂ ನಮ್ಮ ಮನೆಯಲ್ಲಿ ಬಾಡಿಗೆದಾರರಾಗಿದ್ದರಿಂದ ಪರಿಚಯ ಇದೆ. 1ನೇ ಆರೋಪಿಯನ್ನು ಯಾರು ಬಾಡಿಗೆಗೆ ಕರೆದುಕೊಂಡು ಬಂದಿರುತ್ತಾರೆ ಎಂದು ಗೊತ್ತಿಲ್ಲ. ನಾನು ನಾಲ್ಕು ಮನೆಗಳನ್ನು ಬಾಡಿಗೆಗ ಕೊಟ್ಟಿರುತ್ತೇನೆ. ಅದರಲ್ಲಿ 1ನೇ ಆರೋಪಿ, ಆಟೋ ಓಡಿಸುವ ಒಬ್ಬರಿಗೆ ಮತ್ತು ಉಳಿಕೆ ಇಬ್ಬರಿಗೆ ಬಾಡಿಗೆಗೆ ಕೊಟ್ಟಿರುತ್ತೇನೆ. ನನಗೆ 1ನೇ ಆರೋಪಿ ಯಾವ ದಿನಾಂಕ, ತಿಂಗಳು ಮತ್ತು ವರ್ಷದಲ್ಲಿ ಬಾಡಿಗೆ ಬಂದಿರುತ್ತಾರೆ ಎಂದು ಗೊತ್ತಿಲ್ಲ. ನನ್ನ ಮನೆಯನ್ನು 1ನೇ ಆರೋಪಿಗೆ ತಿಂಗಳಿಗೆ ರೂ.3000-00 ಬಾಡಿಗೆಗೆ ಕೊಟ್ಟಿರುತ್ತೇನೆ. 1ನೇ ಆರೋಪಿಗೆ ಬಾಡಿಗೆಗೆ ಕೊಟ್ಟಿರುವ ಬಗ್ಗೆ ಬಾಡಿಗೆ ಕರಾರು ಮಾಡಿರುವುದಿಲ್ಲ. 1ನೇ ಆರೋಪಿ ನನ್ನ ಮನೆಯಲ್ಲಿ ಬಾಡಿಗೆಗೆ ಇರುವ ಬಗ್ಗೆ ಪೋಲಿಸರಿಗೆ ಯಾವುದೇ ದಾಖಲೆ ಕೊಟ್ಟಿರುವುದಿಲ್ಲ. ನಾನು ಮನೆಯ 1ನೇ ಅಂತಸ್ತಿನಲ್ಲಿ ಇರುವುದಕ್ಕೆ 5 ಕಿಟಕಿಗಳು ಇರುತ್ತವೆ. ನಮ್ಮ ಮನೆಯು ಮುಖ್ಯ ರಸ್ತೆಯ ಉತ್ತರ-ದಕ್ಷಿಣ ಅಭಿಮುಖವಾಗಿ ರಸ್ತೆಯ ಐದು ಅಡಿ ದೂರಕ್ಕೆ ಇರುತ್ತದೆ. ಸದರಿ ರಸ್ತೆಯು ಜನಸಂದಣಿಯಾಗಿರುತ್ತದೆ ಎಂದರೆ ಸರಿ.

2. ನಮ್ಮ ಮನೆಯ ಅಕ್ಕಪಕ್ಕದಲ್ಲಿ ಮನೆಗಳಿರುತ್ತವೆ ಎಂದರೆ ನಿಜ. ನಮ್ಮ ಮನೆಯ ಮುಂದೆ ನಾಲ್ಕು ಕಿಟಕಿಗಳು ಇರುತ್ತವೆ. ಸದರಿ ಕಿಟಕಿಗಳು ಯಾವಾಗಲೂ ಮುಚ್ಚಿರುತ್ತದೆ. ನಮ್ಮ ಮನೆಯ ಬಾಗಿಲು ಮಲಗುವವರೆಗೂ ತೆಗೆದಿರುತ್ತದೆ. ನಮ್ಮ ಮನೆಯಲ್ಲಿ ಮಾತನಾಡುವುದು ಅಕ್ಕಪಕ್ಕದ ಮನೆಯವರಿಗೆ ಗೊತ್ತಾಗುತ್ತದೆ. ಘಟನೆ ನಡೆದ ದಿನ ಅಕ್ಕಪಕ್ಕದ ಮನೆಯವರು ಇರುತ್ತಾರೆ. ಅದೇ ಸಮಯಕ್ಕೆ ರಸ್ತೆಯಲ್ಲಿ ಓಡಾಡುತ್ತಿರುತ್ತಾರೆ. 1ನೇ ಆರೋಪಿಗೂ ನನಗೂ ಯಾವುದೇ ವೈಮನಸ್ಸು ಇರುವುದಿಲ್ಲ. ನಾನು ರಾತ್ರಿ 8.00 ಗಂಟೆಗೆ ವಾಕಿಂಗ್ ಹೋಗಿ ಮನೆಗೆ ಬಂದಾಗ 1ನೇ ಆರೋಪಿ ಏಕಾಏಕಿ ಬಂದು ತಲೆಯ ಜುಟ್ಟು ಹಿಡಿದುಕೊಂಡಿರುತ್ತಾನೆ. 1ನೇ ಆರೋಪಿ ನನ್ನ ತಾಳಿ ಚೈನು,

ಕೈ ಬಳೆಗಳು ಮತ್ತು ಓಲೆಗಳನ್ನು ಅವರೆ ಕಿತ್ತುಕೊಂಡಿರುತ್ತಾರೆ. ನನ್ನ ದೂರಿನಲ್ಲಿ 1ನೇ ಆರೋಪಿ ಒಡವೆಗಳನ್ನು ಕಿತ್ತುಕೊಂಡಿರುವ ಬಗ್ಗೆ ಹೇಳಿರುವ ಬಗ್ಗೆ ನೆನಪಿಲ್ಲ.

3. ಮು.ಮಾ 1 ರಿಂದ 1ನೇ ಆರೋಪಿ ಹೊಡೆದಾಗ ನನಗೆ ರಕ್ತ ಬಂದು ಬಟ್ಟೆ ಎಲ್ಲಾ ರಕ್ತವಾಗಿರುತ್ತದೆ. ನಾನು ರಕ್ತವಾದ ಬಟ್ಟೆಯನ್ನು ಪೋಲಿಸರಿಗೆ ಕೊಟ್ಟ ಬಗ್ಗೆ ನೆನಪಿಲ್ಲ. ಮು.ಮಾ 1 ಕ್ಕೆ ರಕ್ತ ಆಗಿರುವ ಬಗ್ಗೆ ಗೊತ್ತಿಲ್ಲ. ಮು.ಮಾ 1 ಅನ್ನು ಪೋಲಿಸರಿಗೆ ಕೊಟ್ಟಾಗ ಅದಕ್ಕೆ ರಕ್ತವಾಗಿರುವ ಬಗ್ಗೆ ಗೊತ್ತಿಲ್ಲ. ನಾನು ಆಸ್ಪತ್ರೆಗೆ 9.00 ಗಂಟೆಗೆ ಹೋಗಿ ಅದೇ ದಿನ ರಾತ್ರಿ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಹೋಗಿರುತ್ತೇನೆ. ನಾನು ನಿಮಾನ್ಸ್ ಆಸ್ಪತ್ರೆಯಿಂದ ಸಂಜೆ 5.00 ಗಂಟೆಗೆ ವಾಪಸ್ಸು ಬಂದಿರುತ್ತೇನೆ. ನಿಮಾನ್ಸ್ ಆಸ್ಪತ್ರೆಯಲ್ಲಿ ವೈದ್ಯರು ಚಿಕಿತ್ಸೆ ನೀಡಿರುತ್ತಾರೆ. ನನ್ನನ್ನು ನಿಮಾನ್ಸ್ ಆಸ್ಪತ್ರೆಗೆ ನನ್ನ ಮಗಳು ಕರೆದುಕೊಂಡು ಹೋಗಿರುತ್ತಾನೆ. ನಾನು ಪೋಲಿಸ್ ಠಾಣೆಗೆ ದೂರು ಕೊಟ್ಟಿರುತ್ತೇನೆ, ಆದರೆ ಯಾವಾಗ ಕೊಟ್ಟಿರುತ್ತೇನೆ ಎಂದು ಗೊತ್ತಿರುವುದಿಲ್ಲ. ನಾನು ಸಿವಿಲ್ ಆಸ್ಪತ್ರೆಯಲ್ಲಿರುವಾಗ ಪೋಲಿಸರು ಬಂದಿರುತ್ತಾರೆ. ನಾನು ಆಸ್ಪತ್ರೆಯಲ್ಲಿರುವಾಗಲೇ ನಿಪಿ 1 ರ ದೂರನ್ನು ಪೋಲಿಸರಿಗೆ ನೀಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಿಪಿ 1 ದೂರಿನಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ.

4. ಪೋಲಿಸರು ಪಂಚನಾಮೆಯನ್ನು ಮರು ದಿನ ಅಂದರೆ 29.02.2022 ರಂದು ಬಂದು ಪಂಚನಾಮೆ ಮಾಡಿರುತ್ತಾರೆ. ಪೋಲಿಸರು ಸಂಜೆ 5.00 ಗಂಟೆಯಿಂದ 6.00 ಗಂಟೆವರೆಗೆ ಪಂಚನಾಮೆ ಮಾಡಿರುತ್ತಾರೆ, ಸಾಕ್ಷಿ ಮುಂದುವರೆದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನನಗೆ ಪಂಚನಾಮೆ ಮಾಡುವಾಗ ಎಷ್ಟು ಜನ ಬಂದಿರುತ್ತಾರೆ ಎಂದು ನೆನಪಿಲ್ಲ. ಪೋಲಿಸರು ಮಾಡಿದ ಪಂಚನಾಮೆಯ ಚೆಕ್ಕುಬಂದಿಗಳು ಗೊತ್ತಿಲ್ಲ. ನನ್ನ ಜೊತೆ ಪಂಚನಾಮೆಗೆ ಚಾಸಾ 2 ಮತ್ತು ಚಾಸಾ 3 ರವರು ಸಹಿ ಮಾಡಿರುತ್ತಾರೆ. ಚಾಸಾ 3 ನನಗೆ ಪರಿಚಯ. ಪೋಲಿಸರು ನನ್ನ ಮನೆಯನ್ನು ಅಳತೆ ಮಾಡಿರುವ ಬಗ್ಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಬೇರೆ ವಿಷಯದ ಬಗ್ಗೆ ಮರು ಹೇಳಿಕೆ ಕೊಟ್ಟಿಲ್ಲ. 1ನೇ ಆರೋಪಿ ನನ್ನ ಮನೆಯಲ್ಲಿ ಬಾಡಿಗೆದಾರನಾಗಿ ಇರಲಿಲ್ಲ ಮತ್ತು ಮನೆಗೆ ಬಂದು ನನ್ನನ್ನು ಹೊಡೆದ ಒಡವೆಗಳನ್ನು ಕಿತ್ತುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನನ್ನ ಮನೆಯ ಬಳಿ ಬಂದು ಪಂಚನಾಮೆ ಮಾಡಿ ಮು.ಮಾ 1 ಅನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ 1 ಮತ್ತು 2 ಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿಗೂ ಹಾಲಿ ಪ್ರಕರಣಕ್ಕೂ ಸಂಬಂದ ಇಲ್ಲದೆ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ- 2ನೇ ಆರೋಪಿ ಪರ ಶ್ರೀ ಜಿ.ಡಿ ವಕೀಲರಿಂದಃ-</u>

5. ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿಯನ್ನು ನಾನು ಯಾವತ್ತು ನೋಡಿಲ್ಲ. 2ನೇ ಆರೋಪಿಯಿಂದ ನನಗೆ ಯಾವುದೇ ತೊಂದರೆಯಾಗಿರುವುದಿಲ್ಲ. 2ನೇ ಆರೋಪಿ ಮೇಲೆ ಯಾವುದೇ ದೂರು ಕೊಟ್ಟಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**(ವಿನೋದ್ ಕುಮಾರ್ ಎಂ )**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**
**ಸಿ.ಸಿ. ಸಂಖ್ಯೆಃ 1308/2022**

**ಸಿ.ಡಬ್ಲ್ಯೂ: 3 /ಪಿ.ಡಬ್ಲ್ಯೂಃ 2**

**ಪ್ರಮಾಣೀಕರಿಸಿದ ದಿನಾಂಕಃ 19.06.2024**

| | |
|---|---|
| **ಹೆಸರು** | **ಮನೋತ್ ಕುಮಾರ್** |
| **ತಂದೆಯ ಹೆಸರು** | **ಕೃಷ್ಣಮೂರ್ತಿ** |
| **ವಯಸ್ಸು** | 34 **ವರ್ಷ** |
| **ವೃತ್ತಿ** | ಕ್ಷೌರಿಕ |
| **ವಾಸ** | **ಅಂಡರಸನ್ ಪೇಟೆ** |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

ಚಾಸಾ 1 ಮತ್ತು 2 ರವರ ಪರಿಚಯ ಇಲ್ಲ.

2. ಸಾಕ್ಷಿಯು ನಿಪಿ 2 ರ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಅದನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ದಿನಾಂಕಃ 28.02.2022 ರಂದು ಚಾಸಾ 1 ರವರ ಮನೆ ಮುಂದೆ ಪೋಲಿಸರು ಬಂದಾಗ ದಿಃ 27.02.2022 ರಂದು ರಾತ್ರಿ 7.30 ಗಂಟೆಗೆ ಚಾಸಾ 1 ರವರ ಮನೆಯಿಂದ ಯಾರೋ ಒಬ್ಬ ಹುಡುಗ ಓಡಿ ಬರುತ್ತಿರುವಾಗ ಚಾಸಾ 1 ರವರು ಕಿರುಚಾಡುತ್ತಿರುವ ವಿಚಾರವಾಗಿ ಸಹಿ ಮಾಡಿರುತ್ತೇನೆ. ಪೋಲಿಸರು ನನ್ನ ಮುಂದೆ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವ ಬಗ್ಗೆ ನೆನಪಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದಃ-**

3. ನಿಪಿ 2 ರ ಪಂಚನಾಮೆಯನ್ನು ಮಾಡುವಾಗ ಪೋಲಿಸರು ಮು.ಮಾ 1 ಅನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ದಿಃ 27.02.2022 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ಚಾಸಾ 1 ರವರ ಮನಯಲ್ಲಿ ಆರೋಪಿ ವಾಲ್ ಮಿಕ್ಸರ್ ನಿಂದ ಚಾಸಾ 1 ರವರ ತಲೆಗೆ ಹೊಡೆದು ಚಾಸಾ 1 ರವರ ಮೈ ಮೇಲೆ ಇದ್ದ ಒಡವೆಗಳನ್ನು ಕಿತ್ತುಕೊಂಡು ಹೋಗಿರುತ್ತಾರೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ಚಾಸಾ 1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುವ ಬಗ್ಗೆ ಗೊತ್ತು ಎಂದರ ಸರಿ. ಚಾಸಾ 1 ರವರನ್ನು ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ಗೊತ್ತಿಲ್ಲ. 1ನೇ ಆರೋಪಿ ಚಾಸಾ 1 ರವರ ಮೈ ಮೇಲೆ ಇದ್ದ ಒಡವೆಗಳನ್ನು ದೋಚುಕೊಂಡು ಹೋಗಿರುತ್ತಾರೆ ಎಂಬುದರ ಬಗ್ಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಮು.ಮಾ 1 ಅನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- 1ನೇ ಆರೋಪಿ ಪರ ಶ್ರೀ ಎಸ್.ಆರ್.ಜೆ ವಕೀಲರಿಂದಃ-**

4. ಚಾಸಾ 1 ರವರು 2015 ರಿಂದ ಪರಿಚಯ ಗೊತ್ತಿರುತ್ತಾರೆ. ಚಾಸಾ 1 ರವರಿಗೆ ಮನೆ ಇರುವ ಬಗ್ಗೆ ಗೊತ್ತಿರುತ್ತದೆ. ಚಾಸಾ 1 ರವರ ಗ್ರೌಂಡ್ ಪ್ಲೋರ್ ನಲ್ಲಿ ಎರಡು ಪೋರ್ಷನ್ ಮತ್ತು 1ನೇ ಪ್ಲೋರ್ ನಲ್ಲಿ 1 ಮನೆ ಇರುತ್ತದೆ. ಚಾಸಾ 1 ರವರು 1ನೇ ಪ್ಲೋರ್ ನಲ್ಲಿರುತ್ತಾರೆ. ದಿಃ 27.02.2022 ರಂದು ಚಾಸಾ

1 ರವರಿಗೆ ಮನೆಯಲ್ಲಿ ರಕ್ತಸ್ರಾವ ಆಗುತ್ತಿರುವ ಬಗ್ಗೆ ನೋಡಿರುತ್ತೇನೆ. ನಿಪಿ 2 ರ ಪಂಚನಾಮೆಯನ್ನು ಪೋಲಿಸರು ಮಾಡುವಾಗ ಸುಮಾರು 20 ಜನರು ಸೇರಿರುತ್ತಾರೆ. ನನ್ನ ಹೆಸರು ಬಿಟ್ಟು ಬೇರೆಯವರ ಹೆಸರು ಗೊತ್ತಿಲ್ಲ. ನಿಪಿ 2 ರ ಪಂಚನಾಮೆಗೆ ನನ್ನನ್ನು ಬಿಟ್ಟು ಬೇರೆ ಯಾರು ಸಹಿ ಮಾಡಿರುತ್ತಾರೆ ಗೊತ್ತಿಲ್ಲ. ನಿಪಿ 2 ರ ಪಂಚನಾಮೆ ಬಗ್ಗೆ ಗೊತ್ತಿರುತ್ತದೆ. ನನ್ನ ಸಮಕ್ಷಮ ಪೋಲಿಸರು ಚಾಸಾ 1 ರವರ ಮನೆಯನ್ನು ಅಳತೆ ಮಾಡಿರುತ್ತಾರೆ. ಆದರೆ ನನಗೆ ಮನೆಯ ಹಾಲ್ ಮತ್ತು ರೂಮ್ ಗಳ ಅಳತೆ ಗೊತ್ತಿಲ್ಲ. ನಿಪಿ 2 ರ ಪಂಚನಾಮೆಯಲ್ಲಿ ಪೋಲಿಸರು ಮನೆಯ ಅಳತೆಗಳ ಬಗ್ಗೆ ಬರೆದಿರುವ ಬಗ್ಗೆ ಗೊತ್ತಿಲ್ಲ. ನಿಪಿ 2 ರ ಪಂಚನಾಮೆ ಚೆಕ್ಕುಬಂದಿ ಗೊತ್ತಿಲ್ಲ.

5. ದಿಃ 28.02.2022 ರಂದು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ನನ್ನ ಹೇಳಿಕೆಯನ್ನು ಪೋಲಿಸರು ಕೈಯಿಂದ ಬರೆದುಕೊಂಡಿರುತ್ತಾರೆ. ನಾನು ಹೇಳಿದಂತೆ ಚಾಸಾ 1 ರವರಿಗೆ ಯಾವುದೇ ರೀತಿ ಹಲ್ಲೆಯಾಗಿಲ್ಲ ಮತ್ತು ಒಡವೆಗಳನ್ನು ಕಿತ್ತುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪಬೋಲಿಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ 2 ರ ಪಂಚನಾಮೆಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ಪರಿಚಯ ಇರುವ ಕಾರಣ ಅವರಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- 1 ನೇ ಆರೋಪಿ ಪರ ಶ್ರೀ ಜಿ.ಡಿ ವಕೀಲರಿಂದಃ-**

ಹಾಲಿ ಪ್ರಕರಣದ ಬಗ್ಗೆ ನನಗೆ ಗೊತ್ತಿರುತ್ತದೆ. ಹಾಲಿ ಪ್ರಕರಣದಲ್ಲಿ ಎಷ್ಟು ಆರೋಪಿಗಳು ಎಂದು ನನಗೆ ಗೊತ್ತಿಲ್ಲ. 2 ನೇ ಆರೋಪಿಗೂ ಹಾಲಿ ಪ್ರಕರಣಕ್ಕೂ ಸಂಬಂದ ಇರುವ ಬಗ್ಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**(ವಿನೋದ್ ಕುಮಾರ್ ಎಂ )**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.**